**ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 01-12-2025 ರಂದು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಅರ್ಜಿದಾರರ ಪರ ಶ್ರೀ ಆರ್ ಆರ್ ಎಚ್ ನ್ಯಾಯವಾದಿರವರಿಂದಃ**

ನಾನು ಈ ಪ್ರಕರಣದಲ್ಲಿ ಅರ್ಜಿದಾರಳಾಗಿದ್ದು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಸಂಗತಿಗಳು ನನಗೆ ಗೊತ್ತಿದ್ದು ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ ಮತ್ತು ಪ್ರಮಾಣ ಪತ್ರದಲ್ಲಿರುವ ವಿಷಯವನ್ನು ನಾನೇ ಹೇಳಿ ಬರೆಸಿರುತ್ತೇನೆ. ಈ ಪ್ರಮಾಣ ಪತ್ರವನ್ನು ಮುಖ್ಯ ವಿಚಾರಣೆಯ ಭಾಗವಾಗಿ ಪರಿಗಣಿಸಲು ಹಾಜರುಪಡಿಸಿರುತ್ತೇನೆ.

ನನ್ನ ಮತ್ತು ಎದುರುದಾರರ ಮದುವೆಗೆ ಸಂಬಂದಿಸಿದಂತೆ ಮದುವೆ ಆಮಂತ್ರಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-1 ಎಂದು, ನನ್ನ ಮತ್ತು ಎದುರುದಾರರ ಮದುವೆಗೆ ಸಂಬಂದಿಸಿದಂತೆ ಮದುವೆ 3 ಪೋಟೋಗಳನ್ನು ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-2 ರಿಂದ 4 ಎಂದು, ಸದರಿ ನಿ.ಪಿ-2 ರಿಂದ 4 ಪೊಟೊಗಳಿಗೆ ಸಂಬಂದಿಸಿದಂತೆ ಸಿಡಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-5 ಎಂದು, ದಿಃ 24-12-2015 ರಂದು ಶ್ರೀ ಚೌಡೇಶ್ವರಿ ಕಲ್ಯಾಣ ಮಂದಿರ ರವರು ನೀಡಿದ ರಶೀಧಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು, ನನ್ನ ಮಗಳ ಜನನ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-7 ಎಂದು, ಕೊಡ್ಕಣಿ ಗ್ರಾಮ ಸರ್ವೆ ನಂ 20/1 ಕ್ಕೆ ಸಂಬಂದಿಸಿದಂತೆ 2024-2025 ನೇ ಸಾಲಿನ ಪಹಣಿ ಪತ್ರಿಕೆಯನ್ನು ನಿ,ಪಿ-8 ಎಂದು, ಕೊಡ್ಕಣಿ ಗ್ರಾಮ ಸರ್ವೆ ನಂ 39/1 ಕ್ಕೆ ಸಂಬಂದಿಸಿದಂತೆ 2024-2025 ನೇ ಸಾಲಿನ ಪಹಣಿ ಪತ್ರಿಕೆಯನ್ನು ನಿ,ಪಿ-9 ಎಂದು, ಕೊಡ್ಕಣಿ ಗ್ರಾಮ ಸರ್ವೆ ನಂ 110/2 ಕ್ಕೆ ಸಂಬಂದಿಸಿದಂತೆ 2024-2025 ನೇ ಸಾಲಿನ ಪಹಣಿ ಪತ್ರಿಕೆಯನ್ನು ನಿ,ಪಿ-10 ಎಂದು, ಕೊಡ್ಕಣಿ ಗ್ರಾಮ ಸರ್ವೆ ನಂ 124/6 ಕ್ಕೆ ಸಂಬಂದಿಸಿದಂತೆ 2024-2025 ನೇ ಸಾಲಿನ ಪಹಣಿ ಪತ್ರಿಕೆಯನ್ನು ನಿ,ಪಿ-11 ಎಂದು ಗುರುತಿಸಲಾಯಿತು .

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಿ ಮೂಂದುಡಲಾಯಿತು.

**(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ ಸರಿ ಇದೆ.**

**ಸ ಇದೆ .**

**ಜೆ.ಎಂ.ಎಫ್.ಸಿ, ಸಿದ್ದಾಪುರ.**